ಹೊಸ ದಿಗಂತ
2
27 Sep 2022

ಕೃಷಿ ತಂತ್ರಜ್ಞಾನಕ್ಕೆ ಡಿಜಿಟಲ್ ತಂತ್ರಜ್ಞಾನದ ಸ್ಪರ್ಶ ಅಗತ್ಯ

ಬೆಂಗಳೂರು: ಕೃಷಿ ತಂತ್ರಜ್ಞಾನಗಳ ಶೀಘ್ರ ವರ್ಗಾವಣೆಗೆ ಡಿಜಿಟಲ್ ತಂತ್ರಜ್ಞಾನ ಅತ್ಯಾವಶ್ಯಕ ಎಂದು ಕೃಷಿ ವಿಶ್ವವಿದ್ಯಾಲಯ ವಿಸ್ತರಣಾ ನಿರ್ದೇಶಕ ಡಾ.ಕೆ.ನಾರಾಯಣ ಗೌಡ ತಿಳಿಸಿದರು.

ಜಿಕೆವಿಕೆ ಆವರಣದಲ್ಲಿ ಡಾ.ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಮಾವೇಶ ಭವನ ದಲ್ಲಿ ಕೃಷಿ ವಿಶ್ವವಿದ್ಯಾಲಯ, ವಿಸ್ತರಣಾ ಶಿಕ್ಷಣ ಸಂಸ್ಥೆ ಹೈದರಾಬಾದ್‌ಇವರ ಸಂಯುಕ್ತ ಆಶ್ರಯದಲ್ಲಿ ನಡೆದ ಸಮರ್ಪಕ ತಂತ್ರಜ್ಞಾನ ವರ್ಗಾವಣೆಗೆ ಡಿಜಿಟಲ್ ತಂತ್ರಜ್ಞಾನ ಕುರಿತ ತರಬೇತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಡಿಜಿಟಲ್ ತಂತ್ರಜ್ಞಾನ ನಮ್ಮ ದೈನಂದಿನ ಚಟುವಟಿಕೆಗಳಲ್ಲಿ ಅವಿಭಾಜ್ಯ ಅಂಗವಾಗಿದೆ. ವಿಶ್ವದಲ್ಲಿ ಡಿಜಿಟಲ್ ಯುಗ ಪ್ರಾರಂಭ ವಾಗಿದೆ.ಹೀಗಾಗಿ,ಕೃಷಿಯಲ್ಲೂಸಹ ಡಿಜಿಟಲ್ ತಂತ್ರಜ್ಞಾನದ ಬಳಕೆ ಅವಶ್ಯಕವಾಗಿದೆ. ಕೃಷಿ ಮತ್ತು ಸಂಬಂಧಿ ಇಲಾಖೆಗಳಲ್ಲಿ ಹಾಗೂ ವಿಶ್ವ ವಿದ್ಯಾನಿಲಯಗಳಲ್ಲಿ ಸಿಬ್ಬಂದಿ ಕೊರತೆ ಇರುವುದರಿಂದ ವಾಟ್ಸ್ ಆಪ್, ಯುಟ್ಯೂಬ್ ಮತ್ತು ಕೃಷಿ ಆಪ್‌ಗಳ ಮೂಲಕ ನೂತನ ತಂತ್ರಜ್ಞಾನಗಳನ್ನು ಕೃಷಿಕರ ಮನೆ ಬಾಗಿಲಿಗೆ ಅತ್ಯಂತ ಕಡಿಮೆ ಸಮಯದಲ್ಲಿ ತಲುಪಿಸಲಾಗುತ್ತಿದೆ. ಹೆಚ್ಚಿನ ಸಂಖ್ಯೆಯ ರೈತ



ಬಾಂಧವರಿಗೆತಲುಪಲು ಡಿಜಿಟಲ್ ತಂತ್ರಜ್ಞಾನ ದಿಂದ ಸಹಕಾರಿಯಾಗಿದೆ ಎಂದರು.

ವಿಸ್ತರಣಾ ಶಿಕ್ಷಣ ಸಂಸ್ಥೆಯ ಪ್ರಾಧ್ಯಾಪಕ ಡಾ.ಎ.ಶೈಲಜಾ ಮಾತನಾಡಿದ ಅವರು, ತರಬೇತಿ ಕಾರ್ಯಕ್ರಮಗಳು ಹೈದರಾ ಬಾದ್ ನ ಜೊತೆಗೆ ಸ್ಥಳೀಯ ಮಟ್ಟದಲ್ಲಿ ಹಮ್ಮಿಕೊಂಡರೆ ಹೆಚ್ಚಿನ ಅಧಿಕಾರಿಗಳು ತರಬೇತಿ ಕಾರ್ಯ ಕ್ರಮದಲ್ಲಿ ಭಾಗವಸುವುದರಿಂದ ಖರ್ಚಿನ ಜೊತೆಗೆ ಸಮಯದ ಉಳಿತಾಯವಾಗಲಿದೆ ಎಂದರು.

ಸಿಬ್ಬಂದಿ ತರಬೇತಿ ಘಟಕದ ತರಬೇತಿ ಸಂಯೋಜಕ ಡಾ.ಕೆ. ಶಿವರಾಮು, ಪ್ರಾಧ್ಯಾಪಕರಾದ ಕಲ್ಪನಾ.ಬಿ, ಡಾ.ಆರ್. ನಾರಾಯಣರೆಡ್ಡಿ, ಸಹ ಪ್ರಾಧ್ಯಾಪಕ ಡಾ.ಸಿ. ವೆಂಕಟೇಶಮೂರ್ತಿ ಇದ್ದರು.

27.09.2022
Hosa Digantha p.02

ಕೃಷಿ ವಿಜ್ಞಾನ ಕೇಂದ್ರದಲ್ಲಿ ಪೋಷಣ್ ಅಭಿಯಾನ

ದೊಡ್ಡಬಳ್ಳಾಪುರ: ದೇಶದಾದ್ಯಂತ ಎಲ್ಲ ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ಇಫ್ಕೋ ಸಂಸ್ಥೆಯಿಂದ ಬೃಹತ್ ಪ್ರಮಾಣದಲ್ಲಿ ಸಸಿ ನೆಡುವ ಕಾರ್ಯಕ್ರಮ ಆಯೋಜನೆ ಮಾಡಲಾಗುತ್ತಿದೆ ಎಂದು ಕೃಷಿ ಅಧಿಕಾರಿ ಕೆ.ಆರ್ ಅಭಿಷೇಕ್ ಹೇಳಿದರು.

ತಾಲೂಕಿನ ಹಾಡೋನಹಳ್ಳಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಇಫ್ಕೋ ಸಂಸ್ಥೆಯ ಸಹಯೋಗದೊಂದಿಗೆ ಆಯೋಜಿಸಿದ್ದ ಪೋಷಣ ಅಭಿಯಾನ ಮತ್ತು ಸಸಿ ನೆಡುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಹಣ್ಣು ಮತ್ತು ತರಕಾರಿಗಳಲ್ಲಿ ದೊರೆಯುವ ಸೂಕ್ಷ್ಮ ಪೋಷಕಾಂಶಗಳು ಮತ್ತು ಪೌಷ್ಟಿಕ ಭದ್ರತೆಯನ್ನು ಕಾಪಾಡಿ ಕೊಳ್ಳುವಲ್ಲಿ ಪೌಷ್ಟಿಕ ಕೈತೋಟದ ಪ್ರಾಮುಖ್ಯತೆಯನ್ನು ತಿಳಿದುಕೊಳ್ಳಬೇಕು ಎಂದರು.

ವಿಜ್ಞಾನಿ ಡಾ. ಈ.ಎಂ ದರ್ಶಿನಿ ಮಾತನಾಡಿ, ರೈತ ಮಹಿಳೆಯರು ಇತ್ತೀಚಿನ ದಿನಗಳಲ್ಲಿ ಆಧುನಿಕವಾಗಿ ಕೃಷಿ ಕೆಲಸ ಮಾಡಬೇಕಾಗಿದೆ. ಕೆಲಸದ ಜತೆ ನಮ್ಮ ಆರೋಗ್ಯದ ಕಡೆ ಹೆಚ್ಚು ಗಮನ ನೀಡಬೇಕು. ಮುಖ್ಯವಾಗಿ ಆರೋಗ್ಯದಲ್ಲಿ ಕಬ್ಬಿಣ ಮತ್ತು ಕ್ಯಾಲ್ಸಿಯಂ ಪೋಷಕಾಂಶ ಗಳ ಪಾತ್ರ ಹಾಗೂ ಸ್ಥಳೀಯವಾಗಿ ದೊರೆಯುವ ಅವುಗಳ ಆಹಾರ ಮೂಲಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಬೇಕು ಎಂದರು.

ನಂತರ ಕೃಷಿ ವಿಜ್ಞಾನ ಕೇಂದ್ರ ವಿಜ್ಞಾನಿ ಎಸ್.ವಿ ಮೇಘನ ಅವರು ಪ್ರಯೋಗಿಕ ವಾಗಿ ಅಪೌಷ್ಟಿಕತೆಯ ಕಾರಣಗಳು, ದೈನಂದಿನ ಜೀವನದಲ್ಲಿ ಸಮತೋಲಿತ ಆಹಾರದ ಪ್ರಾಮುಖ್ಯತೆ ಬಗ್ಗೆ ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಎಲ್ಲರಿಗೂ ಇಫ್ಕೋ ಸಂಸ್ಥೆ ಮತ್ತು ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ಹಲಸಿನ ಹಣ್ಣಿನ ಗಿಡಗಳನ್ನು ವಿತರಿಸಲಾಯಿತು.



ದೊಡ್ಡಬಳ್ಳಾಪುರದ ತಾಲೂಕಿನ ಹಾಡೋನಹಳ್ಳಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಇಫ್ಕೋ ಸಂಸ್ಥೆಯ ಸಹಯೋಗದೊಂದಿಗೆ ಪೋಷಣ ಅಭಿಯಾನ ಮತ್ತು ಸಸಿ ನೆಡುವ ಕಾರ್ಯಕ್ರಮ ನಡೆಯಿತು.

27.09.2022
Vishwa Vani p.09

ಡಿಜಿಟಲ್ ತಂತ್ರಜ್ಞಾನ ಅವಶ್ಯ

ಬೆಂಗಳೂರು : ಕೃಷಿ ತಂತ್ರಜ್ಞಾನಗಳ ಪೀಳಿಗೆ ವರ್ಗಾವಣೆಗೆ ಡಿಜಿಟಲ್ ತಂತ್ರಜ್ಞಾನ ಅತ್ಯವಶ್ಯಕ ಎಂದು ಕೃ.ವಿ.ವಿ ಬೆಂಗಳೂರಿನ ವಿಸ್ತರಣಾ ನಿರ್ದೇಶಕ ಡಾ.ಕೆ.ನಾರಾಯಣಗೌಡ ತಿಳಿಸಿದರು.

ಬೆಂ.ಕೃಷಿ ವಿವಿ ಸಿಬ್ಬಂದಿ ತರಬೇತಿ ಘಟಕ, ವಿಸ್ತರಣಾ ನಿರ್ದೇಶನಾಲಯ ಮತ್ತು ವಿಸ್ತರಣಾ ಶಿಕ್ಷಣ ಸಂಸ್ಥೆ, ಪೈದ ರಾಬಾದ್‌ದ ಸಂಯುಕ್ತಾಶ್ರಯದಲ್ಲಿ ಸಮರ್ಪಕ ತಂತ್ರಜ್ಞಾನ ವರ್ಗಾವಣೆಗೆ ಡಿಜಿಟಲ್ ತಂತ್ರಜ್ಞಾನ ಕುರಿತ ತರಬೇತಿ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಡಿಜಿಟಲ್ ತಂತ್ರಜ್ಞಾನ ನಮ್ಮ ದೈನಂದಿನ ಚಟುವಟಿಕೆಗಳಲ್ಲಿ ಅವಿಭಾಜ್ಯ ಅಂಗವಾಗಿದೆ. ವಿಶ್ವದಲ್ಲಿ ಡಿಜಿಟಲ್ ಯುಗ ಪ್ರಾರಂಭವಾಗಿದೆ. ಆದುದರಿಂದ ಕೃಷಿಯಲ್ಲೂ ಸಹ ಡಿಜಿಟಲ್ ತಂತ್ರಜ್ಞಾನದ ಬಳಕೆ ಅವಶ್ಯಕವಾಗಿದೆ ಎಂದರು.

ಕೃಷಿ ಮತ್ತು ಸಂಬಂಧಿ ಇಲಾಖೆಗಳಲ್ಲಿ ಹಾಗೂ ವಿಶ್ವವಿದ್ಯಾನಿಲಯಗಳಲ್ಲಿ ಸಿಬ್ಬಂದಿ ಕೊರತೆ ಇರುವುದರಿಂದ ವಾಟ್ಸ್ ಆಪ್, ಯುಟ್ಯೂಬ್ ಮತ್ತು ಕೃಷಿ ಆ್ಯಪ್‌ಗಳ ಮೂಲಕ ನೂತನ ತಂತ್ರಜ್ಞಾನಗಳನ್ನು ಕೃಷಿಕರ ಮನೆ ಬಾಗಿಲಿಗೆ ಅತ್ಯಂತ ಕಡಿಮೆ ಸಮಯದಲ್ಲಿ ಹೆಚ್ಚಿನ ಸಂಖ್ಯೆಯ ರೈತ ಬಾಂಧವರಿಗೆ ತಲುಪಲು ಡಿಜಿಟಲ್ ತಂತ್ರಜ್ಞಾನದಿಂದ ಸಹಕಾರಿಯೆಂದು ಅಭಿಪ್ರಾಯಪಟ್ಟರು.



ಚಿಕಿಮಿಕೆ ಆವರಣದಲ್ಲಿ ನಡೆದ ಸಮರ್ಪಕ ತಂತ್ರಜ್ಞಾನ ವರ್ಗಾವಣೆಗೆ ಡಿಜಿಟಲ್ ತಂತ್ರಜ್ಞಾನ ಕುರಿತ ತರಬೇತಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಸಿಬ್ಬಂದಿ ತರಬೇತಿ ಘಟಕದ ತರಬೇತಿ ಸಂಯೋಜಕ ಡಾ.ಕೆ.ಶಿವರಾಮು ಮಾತನಾಡಿ, ಈ ತರಬೇತಿ ಕಾರ್ಯಕ್ರಮದಲ್ಲಿ ಕೃಷಿಯಲ್ಲಿ ಮೊಬೈಲ್ ಆ್ಯಪ್‌ಗಳ ಬಳಕೆ, ಬದಲಾಗುತ್ತಿರುವ ಹವಾಮಾನದಲ್ಲಿ ಡಿಜಿಟಲ್ ತಂತ್ರಜ್ಞಾನ ಸ್ಥಿತಿಸ್ಥಾಪಕತ್ವ, ದೂರ ಸಂವೇದಿ, ಭೌಗೋಳಿಕ ಮಾಹಿತಿ ವ್ಯವಸ್ಥೆಯ ಅಳವಡಿಕೆ, ಮಾರುಕಟ್ಟೆಯಲ್ಲಿ ಡಿಜಿಟಲ್ ತಂತ್ರಜ್ಞಾನ ಬಳಕೆ, ಕೃಷಿ ಸ್ಟಾರ್ಟ್ ಆಪ್‌ಗಳು ಮುಂತಾದ ವಿಷಯಗಳ ಬಗ್ಗೆ ನೋಡಿ ತಿಳಿ ಮಾಡಿ ಕಲಿ ವಿಧಾನವನ್ನು ಅಳವಡಿಸಿಕೊಂಡು ತರಬೇತಿಯನ್ನು ನೀಡಲಾಗುತ್ತದೆ ಎಂದು ತಿಳಿಸಿದರು. ವಿಸ್ತರಣಾ ಶಿಕ್ಷಣ ಸಂಸ್ಥೆಯ ಪ್ರಾಧ್ಯಾಪಕರಾದ ಡಾ.ಎ.ಶೈಲಜಾ, ಪ್ರಾಧ್ಯಾಪಕರಾದ ಡಾ.ಕಲ್ಪನಾ, ಡಾ ಆರ್.ನಾರಾಯಣ ರೆಡ್ಡಿ, ಡಾ: ಸಿ.ವಿ. ವೆಂಕಟೇಶಮೂರ್ತಿ ಸೇರಿದಂತೆ ಮತ್ತಿತರರಿದ್ದರು.

27.09.2022
Samyuktha Kar. p.03

27.09.2022
Kannada Prabha. p.14

ಚಿಕ್ಕ ಹಳ್ಳಿಯಿಂದ ವಿಶ್ವಮಟ್ಟಕ್ಕೆ ಬೆಳೆದ ಉದ್ಯಮಿ ಹೃಷಿಕೇಶ್ ದಾಮ್ಲೆ

ಸಸ್ಯಗಳಲ್ಲಿ ಔಷಧೀಯ ಗುಣ ಪತ್ತೆ ಮಾಡುವ ಆಟ್ರಿಮೆಡ್



Atrimed Plant Science

ಬಿಜಿನೆಸ್ ICONS



ಜಗತ್ತಿನ ಎಲ್ಲಾ ಲೈಸೆನ್ಸಿಂಗ್ ಅಥಾರಿಟಿ, ವಿಶೇಷವಾಗಿ 'ಯುಎಸ್‌ಎಫ್‌ಡಿಎ' ಮೂಲಕ ಆಧುನಿಕ ವೈಜ್ಞಾನಿಕ ಚಿಕಿತ್ಸೆಗೆ ಪೂರಕವಾದ, ಕೊನೆಯ ಪಕ್ಷ ಎರಡು ಮೊಲಿಕ್ಯುಲ್‌ಗಳನ್ನು ಭಾರತ ದೇಶ ವಿಶ್ವಕ್ಕೆ ಕೊಡುಗೆ ನೀಡಬೇಕು ಎಂಬುದು ನನ್ನ ಆಸೆ.
• ಡಾ. ಹೃಷಿಕೇಶ್ ದಾಮ್ಲೆ

ಭಾರತ ಸರ್ಕಾರದ ಜೈವಿಕ ತಂತ್ರಜ್ಞಾನ ಇಲಾಖೆ ಪ್ರಕಟಿಸಿದ '75 ಬಯೋಟೆಕ್ ಇನ್ನೋವೇಶನ್' ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಡಾ.ಹೃಷಿಕೇಶ್ ದಾಮ್ಲೆ ಸಾರಥ್ಯದ ಆಟ್ರಿಮೆಡ್ ಕಂಪನಿಯ ಸಾಧನೆಯ ಸ್ಫೂರ್ತಿಕತೆ ಇಲ್ಲಿದೆ.

ಆಟ್ರಿಮೆಡ್, ಸಸ್ಯ ಆಧಾರಿತ ಔಷಧಸಂಶೋಧನಾ ಹಾಗೂ ಉತ್ಪಾದನಾ ಕಂಪನಿ. ಇದರ ರೂವಾರಿ ಡಾ.ಹೃಷಿಕೇಶ್ ದಾಮ್ಲೆ. ಧರ್ಮಸ್ಥಳ ಸಮೀಪದ ಚಿಕ್ಕಹಳ್ಳಿಯಲ್ಲಿ ಬೆಳೆದ ಇವರು, ಇಂದು ವಿಶ್ವಮಟ್ಟದಲ್ಲಿ ದೇಶದ ಕೀರ್ತಿ ಪತಾಕೆ ಹಾರಿಸಿದ್ದಾರೆ. ಅಮೆರಿಕಾದಲ್ಲಿ ವೈದ್ಯರಾಗಿದ್ದ ಡಾ. ಶಿವನ್ ಗಂಜು ಅವರ ಜೊತೆಗೆ ಆರಂಭಿಸಿದ ಆಟ್ರಿಮೆಡ್ ಫಾರ್ಮಸ್ಯುಟಿಕಲ್ಸ್ ಇಂದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದೆ.

ಈ ಕಂಪನಿಯ ಸಾಧನೆಗಳಲ್ಲಿ ಒಂದು ಮುಖ್ಯವಾದದ್ದು, ಸೆಕೆಂಡರಿ ಮೆಟಬೊಲೈಟ್ಸ್ ಲೈಬ್ರರಿ. ಪ್ರಪಂಚದಲ್ಲಿ ಸುಮಾರು 3,90,000ಕ್ಕಿಂತಲೂ ಹೆಚ್ಚು ಗಿಡಮೂಲಿಕಾ ಸಸ್ಯಗಳಿವೆ. ಅವುಗಳಲ್ಲಿರುವ 4,20,000ದಷ್ಟು ಸೆಕೆಂಡರಿ ಮೆಟಬೊಲೈಟ್ಸ್‌ಗಳ ಪ್ರಪಂಚದ ಅತೀದೊಡ್ಡ ಮಾರ್ಜವಲ್ ಲೈಬ್ರರಿಯನ್ನು ಡಾ.ದಾಮ್ಲೆ ಸ್ಥಾಪಿಸಿದ್ದಾರೆ. ಜಾಗತಿಕ ಮಟ್ಟದಲ್ಲಿ ಮತ್ತಾರೂ ಇಂತಹ ಅಪೂರ್ವ ಸಾಧನೆ ಮಾಡಿಲ್ಲ. ರಾಜೀವ್ ಗಾಂಧಿ ಸೆಂಟರ್ ಫಾರ್ ಬಯೋಟೆಕ್ನಾಲಜಿ ತ್ರಿವೇಂಡ್ರಮ್, ಫರೀದಾಬಾದ್‌ನ ರೀಜನಲ್ ಸೆಂಟರ್ ಫಾರ್ ಬಯೋಟೆಕ್ನಾಲಜಿ, ಐಐಟಿ ಬಿರಗ್‌ಪುರ್, ಇನ್ಸ್‌ಟ್ಯೂಟ್ ಆಫ್ ಅಡ್ವಾನ್ಸ್‌ಡ್ ವೈರಾಲಜಿ ತ್ರಿವೇಂಡ್ರಮ್ ನಂಥಾ ಬೃಹತ್ ಸರ್ಕಾರಿಗಳ ಜೊತೆ ಸಂಶೋಧನಾ ಒಡಂಬಡಿಕೆಯಿದೆ. ಕ್ಯಾನ್ಸರ್ ಬಯಾಲಜಿ, ವೈರಾಲಜಿ ಮೇಲೆ ನಿರಂತರವಾಗಿ ಇಲ್ಲಿ ರಿಸರ್ಚ್ ನಡೆಯುತ್ತಿದೆ.

ಯುಎಸ್‌ಎಫ್‌ಡಿಎ (ಯುನೈಟೆಡ್ ಸ್ಟೇಟ್ಸ್ ಫುಡ್ ಆ್ಯಂಡ್ ಡ್ರಗ್ ಆಡ್ಮಿನಿಸ್ಟ್ರೇಷನ್)ನಲ್ಲಿ ಆಯುರ್ವೇದಿಕ್ ಔಷಧಿಯನ್ನು ರಿಜಿಸ್ಟರ್ ಮಾಡಿರುವ ಮೊದಲ ಕಂಪನಿ ಆಟ್ರಿಮೆಡ್. 'ಸೋರಿಯಾಸಿಸ್'ಗೆ ಅಭಿವೃದ್ಧಿ ಪಡಿಸಿರುವ 'ಸೋರಿಯಾಸ್ಟಾಲ್' ಔಷಧಿಗೆ ಜರ್ಮನಿ ಸೇರಿದಂತೆ ಅನೇಕ ರಾಷ್ಟ್ರಗಳ ಅತ್ಯುತ್ತಮ ಪ್ರಕ್ರಿಯೆ ವ್ಯಕ್ತವಾಗಿದೆ. 2019ರಲ್ಲಿ ಜರ್ಮನಿಯ ವೈದ್ಯಕೀಯ ಮ್ಯಾಗಜಿನ್ 'ಫಾರ್ಮಸ್ಟ್ ಗ್ರೋಯಿಂಗ್ ಫಾರ್ಮಾ ಬಯೋಟೆಕ್ ಕಂಪನಿ' ಎಂದು ಆಟ್ರಿಮೆಡ್ ಬಗ್ಗೆ ಲೇಖನ ಪ್ರಕಟಿಸಿತ್ತು.

'ಪ್ಲಾಂಟ್ ಸ್ಟೆನ್ ಪ್ಲಾಂಟ್ ಪ್ರೊಟೀನ್' ಇದು ಸಂಪೂರ್ಣವಾಗಿ ಸಸ್ಯ ಜನ್ಯ ಪ್ರೋಟೀನ್ ಮೂಲಗಳಾದ ಬಟಾಣಿ, ಅಲಸಂಡೆ, ಕುಚ್ಚಲಕ್ಕಿ ಹೆಸರು ಕಾಳುಗಳಿಂದ ತಯಾರಿಸಲಾದ 100% ಸಸ್ಯಾಹಾರಿ ಪ್ರೋಟೀನ್ ಪೌಡರ್. ಇದನ್ನು ಸೇವಿಸಿದರೆ ಹೊಟ್ಟೆ ಉಬ್ಬರಿಸುವಿಕೆ, ಅಜೀರ್ಣ ಸಮಸ್ಯೆಗಳು ಕಾಣಿಸುವುದಿಲ್ಲ. ಜೊತೆಗೆ ಪ್ರತಿ 100 ಗ್ರಾಂ ಪೌಡರ್‌ನಲ್ಲಿ 75 ಗ್ರಾಂನಷ್ಟು ಪ್ರೋಟೀನ್ ಒದಗಿಸುತ್ತದೆ. ಮಕ್ಕಳಿಗಾಗಿ ತಯಾರಿಸಲಾದ 'ಸಮ್ ಟೋಟಲ್ ನ್ಯೂಟ್ರಿಯೆಂಟ್ ಮಿಕ್ಸ್', ಮಕ್ಕಳ ಬೆಳವಣಿಗೆಗೆ ಅಗತ್ಯವಾದ ಪ್ರೋಟೀನ್ ಮತ್ತು ಪೋಷಕಾಂಶ ನೀಡುತ್ತದೆ. ಈ ಎರಡೂ ಉತ್ಪನ್ನಗಳಲ್ಲಿ ಯಾವುದೇ ರೀತಿಯ ಕೃತಕ ಫ್ಲೇವರ್ಸ್, ಕಲರ್ ಹಾಗೂ ಸಕ್ಕರೆ ಅಂಶ ಇರುವುದಿಲ್ಲ.

ಆಧುನಿಕ ಜೀವನಶೈಲಿಯಿಂದ ಉಂಟಾಗುವ ಸಮಸ್ಯೆಗಳಾದ ಸ್ಟೆಸ್, ಕೊಲೆಸ್ಟಾಲ್, ಲಿವರ್, ಡಯಾಬಿಟಿಸ್ ಸಮಸ್ಯೆ ನಿವಾರಣೆಗೆ ಪರಿಣಾಮಕಾರಿ ಹೆಲ್ತ್ ಸಪ್ಲಿಮೆಂಟ್, 'ಡಯಟ್ ಕೇರ್' ಶ್ರೇಣಿ ಲಭ್ಯವಿದೆ. ಪ್ರಾಚೀನ ಭಾರತದ ಆಹಾರ ಪದ್ಧತಿಯಲ್ಲಿ 'ಸೂಪರ್ ಫುಡ್' ಎಂದು ಕರೆಸಿಕೊಂಡ ಅಪೂರ್ವ ಗಿಡಮೂಲಿಕೆಗಳ ಅಂಶಗಳನ್ನು ಈ ಹೆಲ್ತ್ ಸಪ್ಲಿಮೆಂಟ್‌ಒಳಗೊಂಡಿದೆ. ಕಂಪನಿಯ ಸೌಂದರ್ಯ ವರ್ಧಕ ಉತ್ಪನ್ನಗಳಿಗೆ ಉತ್ತಮ ಬೇಡಿಕೆಯಿದೆ. ಪ್ಲಾಂಟ್ ಸ್ಟೆನ್ ಉತ್ಪನ್ನಗಳಲ್ಲಿ ತಲೆಯ ಹೊಟ್ಟು, ಕೂದಲುದುರುವಿಕೆ, ಮೊಡವೆ, ಭಂಗು ನಿವಾರಣೆಗೆ ಸಹಕಾರಿಯಾದ ಶ್ಯಾಂಪೂ, ಕ್ರೀಮ್, ಹ್ಯಾಂಡ್ ಕ್ರೀಮ್‌ಗಳು ಲಭ್ಯವಿವೆ.



ಮಳೆ ಪರಿಣಾಮ ಗಗನಕ್ಕೇರಿದ ತರಕಾರಿ ಬೆಲೆ

ಹೂವಪ್ಪ ಐ.ಎಚ್. ಬೆಂಗಳೂರು

ಅಕ್ಕಿ ಬೆಲೆ ಏರಿಕೆ ಬೆನ್ನಲ್ಲೇ ತರಕಾರಿ ಬೆಲೆ ಏರಿಕೆ ಜನಸಾಮಾನ್ಯರನ್ನು ಕೆಂಗಡಿಸಿದೆ. ಮದುವೆ, ಧಾರ್ಮಿಕ ಪೂಜಾಗಳು ಆರಂಭವಾಗಿವೆ.ಸಾಲು ಸಾಲು ಹಬ್ಬಗಳು ಬರುತ್ತಿವೆ. ಇಂತಹ ಸಂದರ್ಭದಲ್ಲಿ ಬೆಲೆ ಏರಿಕೆ ಜನಸಾಮಾನ್ಯರಿಗೆ ಹೊರೆಯಾಗಿದೆ. ಹಬ್ಬ ಆಚರಣೆ ಇರಲಿ ಬಡವರ ಪಾಲಿಗೆ ದಿನನಿತ್ಯ ಜೀವನಸಾಗಿಸುವುದು ಕಷ್ಟವಾಗಿದೆ. ತರಕಾರಿ ಬೆಲೆಗಳು ಏರುತ್ತಿವೆ.ಅದ್ರಲ್ಲೂ ಟೊಮ್ಯಾಟೊ, ಕ್ಯಾರೆಟ್, ಹುರುಳಿಕಾಯಿ ಬೆಲೆ ಏರಿಕೆ ಭರಾಟೆ ಜೋರಾಗಿದೆ. 100ರ ಗಡಿ ದಾಟಿವೆ.



ತರಕಾರಿ ಪೂರೈಕೆ ಪ್ರಮಾಣ 100ರಿಂದ 50 ಇಳಿದಿದೆ. ಹಿನ್ನೆಲೆಯಲ್ಲಿ ತರಕಾರಿ ಬೆಲೆ ಏರಿಕೆಗೆ ಕಾರಣವಾಗಿದೆ. ಹೆಚ್ಚು ತರಕಾರಿ ಬೆಳೆಯುವ ಕೋಲಾರ, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ ಪ್ರದೇಶಗಳಲ್ಲಿ ಕಳೆದ ಎರಡು ತಿಂಗಳಿಂದ ಬಿಡುವಿಲ್ಲದೆ ಮಳೆ ಸುರಿಯುತ್ತಿದೆ. ಈ ಹಿನ್ನೆಲೆಯಲ್ಲಿ ತರಕಾರಿ ಬೆಳೆಗಳು ನೆಲಕಚ್ಚಿವೆ. ಹೂವು ಈಚು ನೆಲಕ್ಕೆ ಬಿದ್ದು ಕೊಳೆಯುವುದಲ್ಲದೆ ನಿರಂತರ ಮಳೆಗೆ ಗಿಡಗಳಲ್ಲೇ ಕೊಳೆಯುತ್ತಿದೆ. ಇದರ ಪರಿಣಾಮ ತರಕಾರಿ ಇಳುವರಿ ಕ್ಷೀಣಿಸಿದೆ ಇದು ಮಾರುಕಟ್ಟೆಗೆ ಪೂರೈಕೆ ಕಡಿಮೆಯಾಗಲು ಕಾರಣ .

ಗ್ರಾಹಕರಿಗೆ ಬೆಲೆ ಶಾಕ್: ಈ ಹಿಂದೆ ಅಗ್ಗದ ತರಕಾರಿ ಕೊಂಡ ಗ್ರಾಹಕರಿಗೆ ತೀವ್ರ ಬೆಲೆ ಏರಿಕೆ ಶಾಕ್ ಕೊಟ್ಟಂತಾಗಿದೆ. ಬದನೇಕಾಯಿ, ಬೆಂಡೆಕಾಯಿ, ಸೌತೆಕಾಯಿ ಕೆಲವೊಂದು ತರಕಾರಿ ಹೊರತುಪಡಿಸಿ ಇನ್ನು ಎಲ್ಲಾ ತರಕಾರಿ ಬೆಲೆ ಏರಿಕೆಯಾಗಿದೆ. ಕಳೆದ ತಿಂಗಳ ಹಿಂದೆ ಗ್ರಾಹಕರು ಚಿಲ್ಲರೆ ದರದಲ್ಲಿ ಕೆಜಿಗೆ 15-20 ರು.ಗೆ ಸಿಗುತ್ತಿದ್ದ ಟೊಮ್ಯಾಟೋ ಈಗ 40-50ರು.ಗೆ ಕೊಳ್ಳಬೇಕಾಗಿದೆ. ಇನ್ನು ಕ್ಯಾರೆಟ್, ಹುರುಳಿಕಾಯಿ, ನುಗ್ಗೆಕಾಯಿ ಸೆಂಚುರಿ ಬಾರಿಸಿದೆ. ಹುರಳೀಕಾಯಿ 40-50 ರು. ಇದ್ದ ಬೆಲೆ ಈಗ 80-120 ರು. ಕ್ಯಾರೆಟ್ ಊಟಿ 40-50 ರು. ಇದ್ದ ಬೆಲೆ 100-120 ರು.ಗೆ ಏರಿಕೆಯಾಗಿದೆ.

ನುಗ್ಗೆಕಾಯಿ 50-60 ರು.ಗೆ ಇದ್ದ ಬೆಲೆ ಈಗ 80-100 ರುಗೆ ನವಿಲು ಕೋಸ್ 30-35 ಇದ್ದ ಬೆಲೆ 50-60 ರು. ಗೆ ಜಿಗಿದಿದೆ. ಯಾವಾಗಲೂ ಕಡಿಮೆ ಬೆಲೆ ಕಾಯ್ದುಕೊಳ್ಳುತ್ತಿದ್ದ ಮೂಲಂಗಿ ಬೆಲೆ ಈ ಬಾರಿ 50-60 ರು.ಗೆ ಏರಿಕೆಯಾಗಿದೆ. ಹಾಗಲಕಾಯಿ,ಮೂಲಂಗಿ, ಹೀರೆಕಾಯಿ, ಗೊರಿಕಾಯಿ, ಕ್ಯಾಪ್ಸಿಕಮ್ 30 ರು. ಇದ್ದ ಬೆಲೆ 50-60 ಏರಿಕೆಯಾಗಿದೆ. ಹಸಿಮೆಣಸಿನಕಾಯಿ, ಬೆಂಡೆಕಾಯಿ, ಬದನೇಕಾಯಿ, ಸ್ವಲ್ಪ ಬೆಲೆ ಕಡಿಮೆ ಇದ್ದು 40-50 ಇದೆ. ಉತ್ತಮ ದಪ್ಪ ಒಂದು ನಿಂಬೆಹಣ್ಣು ಬೆಲೆ 8-10 ರು. ಹಾಗೂ ಸಣ್ಣ ಗಾತ್ರದ ಹಣ್ಣುಗಳನ್ನು5-6 ರು.ಗೆ ಮಾರಾಟ ಮಾಡಲಾಗುತ್ತಿದೆ.

ಕಳೆದ ಎರಡು ತಿಂಗಳಿಂದ ಸುರಿದ ಮಳೆಗೆ ಸೊಪ್ಪು ಬೆಳೆ ನಾಶವಾಗಿದೆ. ಮಾರುಕಟ್ಟೆಗೆ ಎಲ್ಲಾ ಸೊಪ್ಪುಗಳ ಪೂರೈಕೆ ಪ್ರಮಾಣ ಬಹಳ ಕಡಿಮೆಯಾಗಿದೆ. ಅದರಲ್ಲೂ ಕೊತ್ತಂಬರಿ ಸೊಪ್ಪು ಹೆಚ್ಚು ಕೊರತೆಯಾಗಿದೆ.ಕಳೆದ ತಿಂಗಳ ಹಿಂದೆ ಒಂದು ಕಟ್ಟಿಗೆ ಮೆಂತೆ 30-35 ರು. ಇತ್ತು. ಈಗ 40-45 ರು. ಸಬ್ಬಸಿಗೆ ಸೊಪ್ಪಿಗೆ 40-45 ಇದ್ದ ಬೆಲೆ ಈಗ 50-60 ರು.ಗೆ ಏರಿಕೆಯಾಗಿದೆ. ಕೊತ್ತಂಬರಿ ಸೊಪ್ಪು ಬೆಲೆ ತೀವ್ರವಾಗಿ ಏರಿಕೆಯಾಗಿದೆ ಚಿಲ್ಲರೆ ಅಂಗಡಿಗಳಲ್ಲಿ ಗ್ರಾಹಕರು 5-6 ರು. ಗೆ ಕೊತ್ತಂಬರಿ ಸೊಪ್ಪು ಕೇಳುವುದು ಇರಲಿ 10 ರು. ಗೆ ಕೊಡಲು ಹಿಂದೆ ಮುಂದೆ ನೋಡುತ್ತಾರೆ ನಾಟಿ ಕೊತ್ತಂಬರಿ ಸೊಪ್ಪುಗೆ ಬೆಲೆ ಜಾಸ್ತಿ ಇರುವುದರಿಂದ ಚಿಲ್ಲರೆ ಅಂಗಡಿಯಲ್ಲಿ ಕಾಣಿಸುವುದು ಅಪರೂಪವಾಗಿದೆ. ಹೀಗಾಗಿ ಮಾಮೂಲಿ ಕೊತ್ತಂಬರಿ ಸೊಪ್ಪು ಮಾರಾಟ ಮಾಡುತ್ತಿದ್ದಾರೆ. ಈ ಹಿಂದೆ ಒಂದು ಕಟ್ಟು 30-50 ಇದ್ದದ್ದು, 80-100 ರು. ಜಿಗಿದಿದೆ.

27.09.2022
Samyuktha Kar. p.10

27.09.2022
Prajavani p.11

ಜಾನುವಾರುಗಳಿಗೆ ಚರ್ಮಗಂಟು ರೋಗದ ಕಾಟ



'ಮಾನವರಿಗೆ ಕೊರೊನಾವೈರಸ್ ಎಷ್ಟು ಅಪಾಯಕಾರಿಯೋ, ಜಾನುವಾರುಗಳಿಗೆ ಚರ್ಮಗಂಟು ರೋಗವು ಅಷ್ಟೇ ಅಪಾಯಕಾರಿ' ಎಂದು ಕೇಂದ್ರ ಮೀನುಗಾರಿಕೆ ಮತ್ತು ಹೈನುಗಾರಿಕೆ ಸಚಿವ ಧರ್ಮಪಾಲ್ ಹೇಳಿದ್ದಾರೆ. ಈ ರೋಗದ ಭೀಕರತೆಯನ್ನು ಅವರ ಈ ಹೇಳಿಕೆ ಬಿಂಬಿಸುತ್ತದೆ. ದೇಶದ 16 ರಾಜ್ಯಗಳ 251 ಜಿಲ್ಲೆಗಳಿಗೆ ಹರಡಿರುವ ಚರ್ಮಗಂಟು ರೋಗವು ಈವರೆಗೆ 1 ಲಕ್ಷಕ್ಕಿಂತಲೂ ಹೆಚ್ಚು ಜಾನುವಾರುಗಳನ್ನು ಬಲಿತೆಗೆದುಕೊಂಡಿದೆ ಎಂದು ವರದಿಯಾಗಿದೆ. ಸೆಪ್ಟೆಂಬರ್ ಮೂರನೇ ವಾರದವರೆಗಿನ ದತ್ತಾಂಶಗಳು ಮಾತ್ರ ಲಭ್ಯವಿದ್ದು, ರೋಗ ಹರಡಿರುವ ಸ್ಥಿತಿಯ ಬಗ್ಗೆ ಪೂರ್ಣ ಚಿತ್ರಣ ಲಭ್ಯವಿಲ್ಲ. ಪ್ರತಿ ರಾಜ್ಯದಲ್ಲಿ ಎಷ್ಟು ಜಾನುವಾರುಗಳಿಗೆ ಈ ರೋಗ ಹರಡಿದೆ ಎಂಬುದರ ನಿಖರ ಮಾಹಿತಿ ಲಭ್ಯವಾಗಿಲ್ಲ

ಜಾನುವಾರುಗಳ ಜೀವಕ್ಕೆ ಕಂಟಕವಾಗಿರುವ 'ಚರ್ಮಗಂಟು ರೋಗ' (ಲಂಪಿ ಸ್ಕಿನ್ ಡಿಸೀಸ್) ದೇಶದಾದ್ಯಂತ ಹರಡುವ ಸೂಚನೆಗಳು ಕಾಣುತ್ತಿವೆ. ದನಗಳಲ್ಲಿ ಇದು ಕಾಣಿಸಿಕೊಂಡಿದೆ. ಕ್ಯಾಪ್ರಿಪಾಕ್ಸ್ ಎಂಬ ವೈರಾಣುವಿನ ಮೂಲಕ ಒಂದು ಜಾನುವಾರುವಿನಿಂದ ಮತ್ತೊಂದಕ್ಕೆ ಇದು ಹರಡುತ್ತದೆ. 2019ರಲ್ಲಿ ದೇಶದಲ್ಲಿ ಕಾಣಿಸಿಕೊಂಡ ಈ ರೋಗ ಇದೇ ಆಗಸ್ಟ್‌ನಿಂದ ವ್ಯಾಪಕವಾಗಿ ಹರಡಲು ಶುರು ಮಾಡಿತು. ಈಗ ಸಾವಿರಾರು ಜಾನುವಾರುಗಳನ್ನು ಬಲಿ ತೆಗೆದುಕೊಂಡಿದೆ. ಸೂಕ್ತ ಮುನ್ನೆಚ್ಚರಿಕೆ ಕ್ರಮಗಳು ಹಾಗೂ ಲಸಿಕೆಯಿಂದ ಈ ರೋಗವನ್ನು ತಡೆಗಟ್ಟಬಹುದಾಗಿದೆ.

16 ರಾಜ್ಯಗಳಿಗೆ ಹರಡಿದ ಸೋಂಕು



ಕರ್ನಾಟಕದ ಸ್ಥಿತಿ

ಕರ್ನಾಟಕದ ಹಾವೇರಿ, ಗದಗ, ಕೋಲಾರ ಮತ್ತು ಬೆಳಗಾವಿಯಲ್ಲಿ ಚರ್ಮ ಗಂಟು ರೋಗ ಹೆಚ್ಚಿನ ಪ್ರಮಾಣದಲ್ಲಿ ಕಾಣಿಸಿಕೊಂಡಿದೆ. ಇತರ ಕೆಲವು ಜಿಲ್ಲೆಗಳಲ್ಲಿಯೂ ಕೆಲವು ಪ್ರಕರಣಗಳು ವರದಿಯಾಗಿವೆ. ಇಲ್ಲಿಯವರೆಗೆ ಐದು ಲಕ್ಷ ಡೋಸ್ ಲಸಿಕೆಗಳನ್ನು ಸರ್ಕಾರವು ಪೂರೈಸಿದೆ. ಅಕ್ಟೋಬರ್‌ನಲ್ಲಿ 25 ಲಕ್ಷ ಡೋಸ್ ಲಸಿಕೆ ಪೂರೈಸಲು ಸಿದ್ಧತೆ ನಡೆಸಲಾಗಿದೆ ಎಂದು ಪಶು ಸಂಗೋಪನಾ ಇಲಾಖೆಯು ಮಾಹಿತಿ ನೀಡಿದೆ. ಈವರೆಗೆ ಮೂರು ಸಾವಿರಕ್ಕೂ ಹೆಚ್ಚು ಜಾನುವಾರುಗಳಲ್ಲಿ ಈ ರೋಗ ದೃಢಪಟ್ಟಿದೆ. 20ಕ್ಕೂ ಹೆಚ್ಚು ಜಾನುವಾರುಗಳು ಮೃತಪಟ್ಟಿವೆ. ಜಾನುವಾರು ಸಾಗಾಟದ ಮೇಲೆ ಕಟ್ಟುನಿಟ್ಟಿನ ನಿಗಾ ಇರಿಸಲಾಗಿದೆ.

ಲಸಿಕೆ

ಚರ್ಮಗಂಟು ರೋಗದಿಂದ ಬಳಲುತ್ತಿರುವ ಜಾನುವಾರುಗಳಿಗೆ ಸೋಂಕು ತಡೆಗಟ್ಟಲು ಗೋಟ್‌ಪಾಕ್ಸ್ ಮತ್ತು ಶೀಪ್‌ಪಾಕ್ಸ್ ಲಸಿಕೆಯನ್ನು ಈಗ ನೀಡಲಾಗುತ್ತಿದೆ. ಈ ಲಸಿಕೆಗಳು ಚರ್ಮಗಂಟು ರೋಗವನ್ನು ಕೇಕಡ ನೂರರಷ್ಟು ತಡೆಯುತ್ತದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ಇಲ್ಲಿವರೆಗೆ ಸುಮಾರು 1 ಕೋಟಿ ಜಾನುವಾರುಗಳಿಗೆ ಗೋಟ್‌ಪಾಕ್ಸ್ ಮತ್ತು ಶೀಪ್‌ಪಾಕ್ಸ್ ಲಸಿಕೆಗಳನ್ನು ನೀಡಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಚರ್ಮಗಂಟು ರೋಗವನ್ನು ತಡೆಯಲೆಂದೇ ಪ್ರತ್ಯೇಕ ಲಸಿಕೆಯನ್ನು ಹರಿಯಾಣದ ಹಿಸ್ಸಾರ್‌ನಲ್ಲಿರುವ ಭಾರತೀಯ ಕೃಷಿ ಸಂಶೋಧನಾ ಮಂಡಳಿ (ಐಸಿಎಆರ್) ಅಭಿವೃದ್ಧಿಪಡಿಸಿದೆ. ಮಂಡಳಿಯ ನ್ಯಾಷನಲ್ ಯುನೀಕ್ ರಿಸರ್ಚ್ ಸೆಂಟರ್ (ಎನ್‌ಇಆರ್‌ಸಿ) ಹಾಗೂ ಬರೇಲಿಯಲ್ಲಿರುವ ಭಾರತೀಯ ಪಶು ಸಂಶೋಧನಾ ಸಂಸ್ಥೆಯ (ಐವಿಆರ್‌ಐ) ಬಂಟ ಸಹಯೋಗದಲ್ಲಿ 'ಲಂಪಿ ಪ್ರೊವ್ಯಾಕ್ ಇಂಡ್' ಎಂಬ ಲಸಿಕೆಯನ್ನು ಅಭಿವೃದ್ಧಿಪಡಿಸಲಾಗಿದೆ. ಕೆಲವು ತಿಂಗಳಲ್ಲಿ ತಯಾರಿಕೆ ಕುರುವಾಗುವ ನಿರೀಕ್ಷೆಯಿದೆ. ಲಸಿಕೆ ತಯಾರಿಕೆಗೆ ಮೂರು ಸಂಸ್ಥೆಗಳು ಮುಂದೆ ಬಂದಿವೆ ಎಂದು ಸರ್ಕಾರ ಮಾಹಿತಿ ನೀಡಿದೆ. ದೇಶದಲ್ಲಿ ಸುಮಾರು 30 ಕೋಟಿ ಜಾನುವಾರುಗಳಿದ್ದು, ಹಂತಹಂತವಾಗಿ ಎಲ್ಲ ಜಾನುವಾರುಗಳನ್ನು ಲಸಿಕಾ ಕಾರ್ಯಕ್ರಮಕ್ಕೆ ಒಳಪಡಿಸಲು ಸರ್ಕಾರ ನಿರ್ಧರಿಸಿದೆ.

ಹರಡುವ ಬಗೆ



ರೋಗ ಲಕ್ಷಣ

- ಜ್ವರ, ಆಹಾರ ನಿರಾಕರಣೆ
- ಹಾಲಿನ ಇಳುವರಿ ಕಡಿಮೆ
- ದನಗಳ ಮೈಮೇಲೆ ಗಂಟುಗಳು ಕಾಣಿಸಿಕೊಳ್ಳುತ್ತವೆ; ಇವು ನಂತರ ಒಡೆದುಹೋಗುತ್ತವೆ

ಹಾಲು ಸುರಕ್ಷಿತ

ಚರ್ಮ ಗಂಟು ರೋಗವು ಪ್ರಾಣಿಗಳಿಂದ ಮನುಷ್ಯರಿಗೆ ಹರಡುವುದಿಲ್ಲ. ರೋಗ ಇರುವ ಹಸುವಿನ ಹಾಲು ಕುಡಿಯುವುದಕ್ಕೆ ಯಾವುದೇ ಅಡ್ಡಿ ಇಲ್ಲ. ಹಾಲನ್ನು ಕುದಿಸಿ ಕುಡಿಯಬಹುದು ಇಲ್ಲವೇ ಕುಡಿಸದೆಯೂ ಕುಡಿಯಬಹುದು ಎಂದು ಭಾರತೀಯ ಪಶು ಸಂಶೋಧನಾ ಸಂಸ್ಥೆಯು ಹೇಳಿದೆ.

ಪರಿಣಾಮಗಳು

- ಒಂದರಿಂದ ಮತ್ತೊಂದಕ್ಕೆ ಹರಡುವ ಕಾರಣ, ಒಂದಿಡೀ ಪ್ರದೇಶದ ಜಾನುವಾರುಗಳಿಗೆ ಈ ರೋಗ ಹರಡುವ ಅಪಾಯ ಇರುತ್ತದೆ
- ರೋಗಪೀಡಿತ ಹಸು, ಎಮ್ಮೆಗಳ ಹಾಲಿನ ಇಳುವರಿ ಕೇ 40ರಷ್ಟು ಕಡಿಮೆಯಾಗುವ ಸಾಧ್ಯತೆಯಿದ್ದು, ಹಾಲಿನ ಉತ್ಪಾದನೆ ತಗ್ಗುತ್ತದೆ; ಹಾಲಿನ ಉಪ ಉತ್ಪನ್ನಗಳ ತಯಾರಿಕೆಗೂ ಹೊಡೆತ ಬೀಳುತ್ತದೆ
- ರೋಗಪೀಡಿತ ದನಗಳು ಮೃತಪಡುವ ಸಾಧ್ಯತೆಯಿದ್ದು, ದನದ ಮಾಂಸ ಉತ್ಪಾದನೆ ಕುಂಠಿತಗೊಳ್ಳುತ್ತದೆ
- ಚರ್ಮೋದ್ಯಮ ಹಾಗೂ ಜಾನುವಾರುಗಳನ್ನು ಒಳಗೊಳ್ಳುವ ಸಂಬಂಧಿತ ಉದ್ಯಮಗಳಲ್ಲಿ ಪಷ್ಟ ಎದುರಾಗುವ ಸಾಧ್ಯತೆಯಿದೆ
- ಜಾನುವಾರುಗಳನ್ನು ಬಳಸಿ ಉಳುಮೆ ಮಾಡುವ ಹಾಗೂ ಪೈಸುಗಾರಿಕೆ ಉದ್ಯಮದಲ್ಲಿ ತೊಡಗಿರುವ ರೈತರಿಗೆ ಅರ್ಥಿಕವಾಗಿ ಸಂಕಷ್ಟ ಎದುರಾಗುತ್ತದೆ
- ರೋಗಪೀಡಿತ ದನಗಳ ಆರೈಕೆ, ಲಸಿಕೆ, ಚೇತರಿಕೆಗೆ ಸಾಕಷ್ಟು ಹಣ ಹಾಗೂ ಸಮಯ ಬೇಕಾಗುತ್ತದೆ

ಆಧಾರ: ಪಿಟಿಐ, ಕೇಂದ್ರ ಮೀನುಗಾರಿಕೆ ಮತ್ತು ಪೈಸುಗಾರಿಕೆ ಸಚಿವಾಲಯ, ಪಿಕ್ಕ ಆರೋಗ್ಯ ಸಂಸ್ಥೆ

ನಿಯಂತ್ರಣ ಹೇಗೆ?

- ರೋಗಪೀಡಿತ ಜಾನುವಾರುಗಳನ್ನು ಆರೋಗ್ಯವಂತ ಜಾನುವಾರುಗಳಿಂದ ತಕ್ಷಣ ಬೇರ್ಪಡಿಸಬೇಕು, ರೋಗಪೀಡಿತ ಜಾನುವಾರುಗಳಿಗೆ ಪಶುವೈದ್ಯರಿಂದ ಚಿಕಿತ್ಸೆ ಕೊಡಿಸಬೇಕು
- ಜಾನುವಾರು ಕೊಟ್ಟಿಗೆಗಳನ್ನು ಸ್ವಚ್ಛಗೊಳಿಸಬೇಕು, ಸೋಂಕು ನಿವಾರಕಗಳನ್ನು ಪಶು ವೈದ್ಯರ ಸಲಹೆಯಂತೆ ಸಂಪಡಿಸಬೇಕು
- ರೋಗಕ್ಕೆ ಚಿಕಿತ್ಸೆ ನೀಡುವುದರ ಜತೆಗೆ, ಖನಿಜಾಂಶವುಳ್ಳ ಔಷಧ, ರೋಗ ನಿರೋಧಕ ಶಕ್ತಿ ಹೆಚ್ಚಿಸುವ ಔಷಧಗಳನ್ನು ನೀಡಬೇಕು. ಇದರಿಂದ ಜಾನುವಾರುಗಳು ನಿಶ್ಶಕ್ತವಾಗುವುದನ್ನು ತಪ್ಪಿಸಬಹುದು
- ಜಾನುವಾರು ಸಾವಸ್ಥಪ್ಪಿದರೆ ಅವುಗಳಿಗೆ ಸೋಂಕು ನಿವಾರಕ ಸಿಂಪಡಿಸಿ, ಅಳವಾಡ ಗುಂಡಿ ತೋಡಿ ಹೂಳಬೇಕು
- ನಾಲ್ಕು ತಿಂಗಳಿಗಿಂತ ಹೆಚ್ಚು ವಯಸ್ಸಾದ ಎಲ್ಲ ಜಾನುವಾರುಗಳಿಗೆ ಚರ್ಮಗಂಟು ರೋಗ ತಡೆ ಲಸಿಕೆ ಹಾಕಬಹುದು



- ಸೋಂಕು ಕಾಣಿಸಿಕೊಂಡ ಊರಿನ ಸುತ್ತಲು ಐದು ಕಿ.ಮೀ. ವ್ಯಾಪ್ತಿಯಲ್ಲಿ ಲಸಿಕೆ ಅಭಿಯಾನ ನಡೆಸಿ ಸೋಂಕು ಹರಡುವುದನ್ನು ತಡೆಯಬಹುದು
- ಸೋಂಕು ಪೀಡಿತ ಪ್ರದೇಶದ ಜಾನುವಾರುಗಳನ್ನು ಸೋಂಕು ಇಲ್ಲದ ಪ್ರದೇಶಕ್ಕೆ ಒಯ್ಯಬಾರದು. ಸೋಂಕು ಇಲ್ಲದ ಪ್ರದೇಶದ ಜಾನುವಾರುಗಳನ್ನು ಸೋಂಕು ಇರುವ ಪ್ರದೇಶಕ್ಕೆ ಕರೆತರಬಾರದು
- ರೋಗಪೀಡಿತ ಜಾನುವಾರುಗಳ ಆರೈಕೆ ಮಾಡುತ್ತಿರುವವರು ಆರೋಗ್ಯವಂತ ಜಾನುವಾರುಗಳಿಂದ ದೂರ ಇರಬೇಕು. ರೋಗ ಇರುವ ಪ್ರದೇಶದ ಬಹಿರು ರೋಗ ಇಲ್ಲದ ಕಡೆಗೆ ಹೋಗುವುದರ ಮೇಲೆ ನಿರ್ಬಂಧ ಹೇರಬೇಕು
- ರೋಗ ಕಾಣಿಸಿಕೊಂಡ ಪ್ರದೇಶದ ಸುತ್ತಲಿನ 10 ಕಿ.ಮೀ. ವ್ಯಾಪ್ತಿಯಲ್ಲಿ ನಡೆಯುವ ಜಾನುವಾರು ಸಂತೆಗಳನ್ನು ರದ್ದುಪಡಿಸಬೇಕು

ಗುಂಡಣ್ಣ